ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **298/2020**

| | | |
|---|---|---|
| ಸಾಕ್ಷಿಯ ಹೆಸರುಃ | ಶಿವರಾಜ | ಪ್ರಾಸಾಃ 1 |
| ತಂದೆ/ಗಂಡನ ಹೆಸರುಃ | ಕರಿಬಸಪ್ಪ | ಚಾಸಾಃ 4 |
| ವಯಸ್ಸು ಃ | 35 ವರ್ಷ | ದಿಃ 21-11- 2025 |
| ಉದ್ಯೋಗಃ | ಪಿ.ಐ ಕೊಪ್ಪಳ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಕೊಪ್ಪಳ | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>

ನಾನು ನವೆಂಬರ 2019 ರಿಂದ ಅಕ್ಟೊಬರ್ 2020 ರವರೆಗೆ ಯಾದಗಿರಿ ಡಿ. ಆರ್ ಕೇಂದ್ರ ಸ್ಥಾನದಲ್ಲಿ ಆರ್, ಎಸ್ ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 15.01.2020 ರಂದು ಸಂಜೆಃ 6.00 ಗಂಟೆ ಸುಮಾರಿಗೆ ನಾನು ಕಚೇರಿಯಲ್ಲಿದ್ದಾಗ ಚಾಸಾಃ 1 ರವರು ನನಗೆ ಕರೆ ಮಾಡಿ ಯರಗೋಳ ಗ್ರಾಮದಲ್ಲಿ ಕಾನೂನು ಬಾಹಿರವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ತಿಳಿಸಿರುತ್ತಾರೆ. ನಾನು, ಚಾಸಾಃ 1 ಮತ್ತು 5 ರವರು ಯರಗೋಳ ಗ್ರಾಮಕ್ಕೆ ಹೋಗಿರುತ್ತೇವೆ. ಸದರಿ ಮರೆಯಾಗಿ ನಿಂತು ಕಿರಾಣಿ ಅಂಗಡಿಯಲ್ಲಿ ನೋಡಿದಾಗ ಆರೋಪಿತನು ಅಕ್ರಮವಸಿವಾಗಿ ಮಾರಾಟ ಮಾಡುವುದನ್ನು ಖಚಿತಪಡಿಸಿಕೊಂಡು ದಾಳಿ ಮಾಡಿದಾಗ, ಆರೋಪಿತನನ್ನು ಹಿಡಿದುಕೊಂಡಿರುತ್ತೇವೆ. ವಿಚಾರಿಸಿದಾಗ ಆರೋಪಿತನು ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ಹೇಳಿರುತ್ತಾನೆ. ಸದರಿ ಅಂಗಡಿಯಲ್ಲಿ ಪರಿಶೀಲಿಸಿದಾಗ 90 ಎಮ್. ಎಲ್ ನ 27 ಯುಎಸ್ ವಿಸ್ಕಿ ಬಾಟಲಿಗಳು, 180 ಎಮ್. ಎಲ್ ನ 5 ಆಫೀಸರ್ ಚಾಯ್ಸ ಪೆಪರ ಪಾಕೆಟಗಳು, 90 ಎಮ್. ಎಲ್ ನ 16 ಓರಿಜಿನಲ್ ಚಾಯ್ಸ ಪೆಪರ ಪಾಕೆಟ, 90 ಎಮ್. ಎಲ್ ನ 6 ಎಮ್. ಸಿ ರಮ್. 180 ಎಮ್. ಎಲ್ ನ 6 ಬ್ಯಾಕ ಪೈಪರ ವಿಸ್ಕಿ ಪಾಕೆಟಗಳು, 90 ಎಮ್. ಎಲ್ ನ 5 ಬೆಂಗಳೂರು ವಿಸ್ಕಿ, 180 ಎಮ್. ಎಲ್ 5 ಓಟಿ ವಿಸ್ಕಿ ಸಿಕ್ಕಿರುತ್ತವೆ. ನಂತರ ಇಬ್ಬರು ಪಂಚರನ್ನು ಕರೆಯಿಸಿಕೊಂಡು ಪಂಚನಾಮೆಯನ್ನು ಜರುಗಿಸಿರುತ್ತೇವೆ. ನಂತರ ಠಾಣೆಗೆ ಹೋಗಿ ಸಮಯ 8.30 ಕ್ಕೆ ಆರೋಪಿ ಮತ್ತು ವರದಿಯನ್ನು ನೀಡಿರುತ್ತೇವೆ. ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಸ್ಯಾಂಪಲಗಳನ್ನು ಮು. ಮಾ 1 ರಿಂದ 7 ಎಂದು ಗುರುತಿಸಲಾಯಿತು. ನಾನು ಪೊಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ.

ಪಾಟಿ ಸವಾಲುಃ ಆರೋಪಿ ಪರ ಶ್ರೀ ಎಸ್. ಬಿ. ವಕೀಲರಿಂದ.

1. ಪಂಚರನ್ನು ಚಾಸಾಃ 1 ರವರು ಕರೆಸಿರುತ್ತಾರೆ. ವಿಕ್ಷಣೆ ಮಾಡಿದ್ದು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಸದರಿ ಮರೆಯಾಗಿ ನಿಂತು ನೋಡಿದ ಸ್ಥಳ ರಸ್ತೆಯಾಗಿತ್ತು. ಶೋಧನಾ ಸಮ್ಮೃಚಿತ ವರದಿ ಮಾಡಿದ್ದರ ಬಗ್ಗೆ ಚಾಸಾಃ 1 ರವರಿಗೆ ಮಾಹಿತಿ ಇರುತ್ತದೆ. ಸದರಿ ಅಂಗಡಿ ಕಿರಾಣಿ ಅಂಗಡಿ ಇರುತ್ತದೆ. ಚಾಸಾಃ 1 ರವರು ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿರುತ್ತಾರೆ. ಜಪ್ತಿ ಪಂಚನಾಮೆಯಲ್ಲಿ ನಾನು ಸಹಿ ಮಾಡಿರುವುದಿಲ್ಲ. ಪಂಚನಾಮೆ ಮಾಡಿದ್ದರ ಬಗ್ಗೆ ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಪಂಚನಾಮೆಯನ್ನು ಠಾಣೆಯಲ್ಲಿ ತಯಾರಿಸಿರುತ್ತೇವೆ ಎಂದರೆ ಸರಿ. ಗುನ್ಹೆ ಸ್ಥಳಕ್ಕೆ ಹೋಗಿಲ್ಲ, ಯಾವುದೇ ಪಂನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾಃ 1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **298/2020**

| | | |
|---|---|---|
| ಸಾಕ್ಷಿಯ ಹೆಸರುಃ | ಮಹಾಂತೇಶ | ಪ್ರಾಸಾಃ 2 |
| ತಂದೆ/ಗಂಡನ ಹೆಸರುಃ | ಕಲ್ಲಪ್ಪ | ಚಾಸಾಃ 5 |
| ವಯಸ್ಸು ಃ | 33 ವರ್ಷ | ದಿಃ 21-11- 2025 |
| ಉದ್ಯೋಗಃ | ಪೊಲಿಸ ಪೇದೆ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ವಿಜಯಪೂರ | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>

ನಾನು 2012 ರಿಂದ 2024 ರವರೆಗೆ ಯಾದಗಿರಿ ಡಿ. ಆರ್ ಕೇಂದ್ರ ಸ್ಥಾನದಲ್ಲಿ ಪೊಲಿಸ ಪೇದೆ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 15.01.2020 ರಂದು ನಾನು ಕಚೇರಿಯಲ್ಲಿದ್ದಾಗ ಚಾಸಾಃ 1 ರವರು ನನಗೆ ಕರೆ ಮಾಡಿ ಯರಗೋಳ ಗ್ರಾಮದಲ್ಲಿ ಕಾನೂನು ಬಾಹಿರವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ತಿಳಿಸಿರುತ್ತಾರೆ. ಸರಕಾರಿ ವಾಹನ ನಂಬರ ಕೆಎ-33-ಜಿ-0127 ನೇದ್ದರ ಮೂಲಕ ಯರಗೋಳ ಗ್ರಾಮಕ್ಕೆ ಹೋಗಿರುತ್ತೇವೆ. ಸದರಿ ಆರೋಪಿ ಮದ್ಯ ಮಾರಾಟ ಮಾಡುವುದನ್ನು ನೋಡಿ ದಾಳಿ ಮಾಡಿದಾಗ ಆರೋಪಿತನನ್ನು ಹಿಡಿದಿರುತ್ತೇವೆ. ಸ್ಥಳವನ್ನು ಪರಿಶೀಲಿಸಿದಾಗ ಆರೋಪಿತನು ಪರವಾನಿಗೆ ಇರುವುದಿಲ್ಲ ಎಂದು ಹೇಳಿರುತ್ತಾನೆ. ಸದರಿ ಅಂಗಡಿಯಲ್ಲಿ ಪರಿಶೀಲಿಸಿದಾಗ 90 ಎಮ್. ಎಲ್ ನ 27 ಯುಎಸ್ ವಿಸ್ಕಿ ಬಾಟಲಿಗಳು, 180 ಎಮ್. ಎಲ್ ನ 5 ಆಫೀಸರ್ ಚಾಯ್ಸ್, 90 ಎಮ್. ಎಲ್ ನ 16 ಓರಿಜಿನಲ್ ಚಾಯ್ಸ್ ಪೆಪರ ಪಾಕೆಟ, 180 ಎಮ್. ಎಲ್ ನ 5 ಆಫೀಸರ್ ಚಾಯ್ಸ್ ಪೆಪರ ಪಾಕೆಟಗಳು, 180 ಎಮ್. ಎಲ್ 5 ಓಟಿ ವಿಸ್ಕಿ, 90 ಎಮ್. ಎಲ್ ನ 5 ಬೆಂಗಳೂರು ವಿಸ್ಕಿ, 180 ಎಮ್. ಎಲ್ ನ 6 ಬ್ಯಾಕ ಪೈಪರ ವಿಸ್ಕಿ ಪಾಕೆಟಗಳು ಸಿಕ್ಕಿರುತ್ತವೆ. ಪಂಚನಾಮೆಯನ್ನು ಜರುಗಿಸಿ ಕಚೇರಿಗೆ ಬಂದು ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ.

<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಎಸ್. ಬಿ. ವಕೀಲರಿಂದ.</u>

1. ಸದರಿ ಮು.ಮಾ.ಗಳು ಕಿರಾಣಿ ಅಂಗಡಿಯಲ್ಲಿ ಸಿಕ್ಕಿರುತ್ತವೆ. ಸ್ಥಳದಲ್ಲಿಯೇ ಪಂಚನಾಮೆಯನ್ನು ಮಾಡಿರುತ್ತೇವೆ. ಪಂಚನಾಮೆಗೆ ನಾನು ಸಹಿ ಮಾಡಿರುವುದಿಲ್ಲ. ಪಂಚರನ್ನು ಚಾಸಾಃ 1 ರವರು ಕರೆಸಿರುತ್ತಾರೆ. ಸದರಿ ಪಂಚನಾಮೆಯನ್ನು ಠಾಣೆಯ ಆವರಣದಲ್ಲಿ ಮಾಡಿದ್ದರ ಬಗ್ಗೆ ನಮೂದು ಇರುತ್ತದೆ. ನಾನು ಗುನ್ಹೆ ಸ್ಥಳಕ್ಕೆ ಹೋಗದೆ ಇದ್ದರೂ ಕೂಡ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಮು. ಮಾ. ಜಪ್ತಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಚಾಸಾಃ 1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ